ಆ) ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ ಅದನ್ನು ದುರಸ್ಥಿ ಮಾಡಿ ಪ್ರಾರಂಭಿಸುವ ವಿಚಾರವಿದೆಯೇ:

ಇ) ಇದ್ದರೆ. ಎಂದಿನಿಂದ ರಿಪೇರಿ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಹಾಗೂ ಸದರಿ ಪ್ರವಾಸಿ ಮಂದಿರ ಪ್ರಾರಂಭಿಸಲು ಇರುವ ಅಡಚಣೆಗಳಾದರು ಏನು:

ಈ) ಒಂದು ವೇಳೆ ಅದನ್ನು ಪ್ರಾರಂಭಿಸದೇ ಇದ್ದಲ್ಲಿ ಕಿಟಕಿ, ಬಾಗಿಲು ಮತ್ತು ಕಲ್ಲು, ಮಣ್ಣು ಸಹಿತ ಕಿಡಿಗೇಡಿಗಳು ಕಿತ್ತು ಹಾಳು ಮಾಡಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ಆಸ್ತಿಯನ್ನು ಹಾಳುಗೆಡುವುದಿಲ್ಲವೆ:

ಉ) ಯಾರು ಹೊಣೆ:

ಊ) ಹಾಗಿದ್ದಲ್ಲಿ, ಇದನ್ನು ಇಲ್ಲಿಯವರೆಗೆ ನಿರ್ಲಕ್ಷಿಸಲು ಕಾರಣವೇನು?

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು.

ಆ) ಹೌದು.

ಇ) ಸದರಿ ಪ್ರವಾಸಿ ಮಂದಿರಕ್ಕೆ ಹೋಗಲು ರಸ್ತೆಯು ನಿರ್ಮಾಣವಾಗದೇ ಇರುವುದರಿಂದ ಪ್ರವಾಸಿ ಮಂದಿರವನ್ನು ಪ್ರಾರಂಭಿಸಲು ಅಡಚಣೆ ಉಂಟಾಗಿದೆ.

ಈ) ಕಟ್ಟಡದಲ್ಲಿ ಯಾವುದೇ ಸಾಮಾಗ್ರಿಗಳು ಕಳವಾಗದಂತೆ ನೋಡಿಕೊಳ್ಳಲು ಕಾವಲುಗಾರರನ್ನು ನೇಮಿಸಲಾಗಿದೆ.

ಉ) ಸಮಸ್ಯೆ ಉದ್ಭವಿಸುವುದಿಲ್ಲ.

ಊ) ಸದರಿ ಪ್ರವಾಸಿ ಮಂದಿರಕ್ಕೆ ಹೋಗಲು ರಸ್ತೆಯನ್ನು ನಿರ್ಮಾಣ ಮಾಡಲು ಅನುದಾನದ ಕೊರತೆ ಇದ್ದು, ಅನುದಾನದ ಲಭ್ಯತೆಯ ಮೇರೆಗೆ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

422 (627) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಪ್ರಕಟಿಸಿದ ವೇಳಾಪಟ್ಟಿಯಂತೆ 1.1.2006ಕ್ಕೆ ಆರಂಭವಾಗಬೇಕಿದ್ದ ಕೈಗಾರಿಕಾ ವಿಕಾಸ ಯೋಜನೆಯು ಕುಂಟುತ್ತಾ ಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ಯೋಜನೆಯನ್ನು ತ್ವರಿತ ಗತಿಯಲ್ಲಿ ಆರಂಭಿಸಲು ಸರ್ಕಾರ ಉದ್ದೇಶಿಸಿದೆಯೇ:

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಪ್ರಾದೇಶಿಕ ಅಸಮತೋಲನ ನಿವಾರಣೆ ಬಗೆಗಿನ ಡಾ: ಡಿ.ಎಂ. ನಂಜುಂಡಪ್ಪ ವರದಿಯ ಆಧಾರದ ಮೇಲೆ ಸರ್ಕಾರವು ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳನ್ನು ಕೈಗಾರಿಕರಣಗೊಳಿಸಲು "ಕೈಗಾರಿಕಾ ವಿಕಾಸ" ಎಂಬ ಹೊಸ ಯೋಜನೆಯನ್ನು ಅನುಷ್ಠಾನ

ಗೊಳಿಸಲು ಸರ್ಕಾರಿ ಆದೇಶ ಸಂಖ್ಯೆ ಸಿಐ 154 ಸಿಎಸ್‌ಸಿ 2005 ದಿ:8.12.2005ರಂದು ಹೊರಡಿಸಿ ಕಾರ್ಯಕ್ರಮ ತೀವ್ರಗತಿಯಲ್ಲಿ ಜಾರಿಗೊಳಿಸಲಾಗುತ್ತಿದೆ.

ಆ) ಹೌದು.

ಇ) 2005–06ನೇ ಸಾಲಿನಲ್ಲಿ ಪ್ರಥಮ ಹಂತದಲ್ಲಿ ಇಲಾಖೆಯ ಸ್ವಾಮ್ಯಕ್ಕೆ ಒಳಪಟ್ಟ ನಿಗಮ:ಮಂಡಳಿಗಳಿಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಒಟ್ಟು ರೂ. 18.16 ಕೋಟಿ ಈ ಕೆಳಕಂಡ ನಿಗಮ:ಮಂಡಳಿಗಳಿಗೆ ಕಾರ್ಯಕ್ರಮ ಅನುಷ್ಠಾನಗೊಳಿಸಲು ಬಿಡುಗಡೆ ಮಾಡಲಾಗಿದೆ.

ಕ್ರ. ಸಂ.	ಸಂಸ್ಥೆಗಳು	ಅನುದಾನ (ರೂ. ಲಕ್ಷಗಳಲ್ಲಿ
1	ಕೆಐಎಡಿಬಿ	300.00
2	ಕೆಎಸ್‌ಎಸ್‌ಐಡಿಸಿ	130.00
3	ಜಿಟಿಟಿಸಿ	1061.00
4	ಕೆಹೆಚ್‌ಡಿಸಿ	48.00
5	ಕೆಎಸ್‌ಸಿಪಿಡಿಸಿ	51.00
6	ಕೆಎಸ್‌ಸಿಡಿಸಿ	46.00
7	ಟೆಕ್ಸಾಕ್	40.00
8	ಸಿಡಾಕ್	40.00
9	ಕೆವಿಐಬಿ	34.00
10	ಕೆಎಸ್‌ಹೆಚ್‌ಡಿಸಿ	46.00
11	ಅವೇಕ್	20.00
	ಒಟ್ಟು	**1816.00**

423 (629) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಧಿಕೃತ ಸಾರಾಯಿ ಅಂಗಡಿಗಳಿಗಿಂತ ಅನಧಿಕೃತ ಸಾರಾಯಿ ಅಂಗಡಿಗಳೇ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ಅನಧಿಕೃತ ಸಾರಾಯಿ ಅಂಗಡಿಗಳನ್ನು ಅಧಿಕೃತಗೊಳಿಸಲು ಅಥವಾ ಮುಚ್ಚಿಸಲು ಸರ್ಕಾರ ಸಂಕಲ್ಪಿಸಿದೆಯೆ:

ಇ) ಈ ಅಧಿಕೃತ ಸಾರಾಯಿ ಅಂಗಡಿಗಳಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾಗುತ್ತಿರುವ ಆರ್ಥಿಕ ನಷ್ಟ ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?